ಮನೆಯಲ್ಲಿ ಅಪ್ಪನಿಗೆ ನೆರವಾಗಲು ನಿಂತ ಮಾಧವ ಅಣ್ಣನಿಗಿಂತಾ ಹೆಚ್ಚು ಪುಣ್ಯವಂತ ಅನಿಸುತ್ತದೆ ಸುವರ್ಣನಿಗೆ. ಹೊತ್ತಿಗೆ ಸರಿಯಾಗಿ ಊಟ, ತಿಂಡಿ ತಿಂದುಕೊಂಡು, ಮೈಮುರಿ ಗೆಯ್ದುಕೊಂಡು, ಕಣ್ತುಂಬಾ ನಿದ್ದೆ ಮಾಡಿಕೊಂಡು ಸುಖವಾಗಿದ್ದಾನೆ. ಮನ ಒಪ್ಪುವ ಹುಡುಗಿ ಸೊಸೆಯಾಗಿ ಸಿಕ್ಕಿದ್ದಾಳೆ. ಮನೆಯ ಜವಾಬ್ದಾರಿಯಲ್ಲಿ ಪಾಲು ತೆಗೆದುಕೊಂಡಿದ್ದಾಳೆ. ಯೋಗ್ಯ ವಯಸ್ಸಿನಲ್ಲಿ ಮಗನೂ ಹುಟ್ಟಿ, ಕೇಶವ ಅಣ್ಣನಾದರೂ ಅವನಿಗೆ ಮಗಳು ಹುಟ್ಟಿದ್ದು ಮೊನ್ನೆ ಮೊನ್ನೆ. 'ಕೆರಿಯರ್ ಮುಖ್ಯ. ಈಗಲೇ ಮಗು ಮಾಡ್ಕೊಳ್ಳೋಕೆ ನಾವು ರೆಡಿ ಇಲ್ಲ' ಕಡ್ಡಿ ಮುರಿದಂತೆ ಹೇಳಿದ್ದಳು ಮಗ ಪ್ರೀತಿಸಿ ಮದುವೆಯಾಗಿದ್ದ ಸೊಸೆ. ಒಟ್ಟಿನಲ್ಲಿ 'ತನ್ನ ಮಗನಿಗೆ ಸುಖ ಇಲ್ಲ' ಎಂದು ನಂಬಿಕೊಂಡುಬಿಟ್ಟಿದ್ದಳು ಸುವರ್ಣ. ಅವಳ ದೃಷ್ಟಿಯಲ್ಲಿ ಸುಖ ಅಂದರೆ ಮಗನ ಬೇಕುಬೇಡಗಳನ್ನು ಗಮನಿಸುವುದು. ಬೇಕುಬೇಡಗಳನ್ನು ಅಂದರೆ ಅವನಿಗೆ ರುಚಿಸುವ ಊಟೋಪಚಾರಗಳಿಂದ ಸಂತೃಪ್ತಿಗೊಳಿಸುವುದು. ಈ ಪರಿಧಿಯಾಚೆ ಅವಳ ಮಾತೃಹೃದಯ ಯೋಚಿಸುತ್ತಿರಲಿಲ್ಲ.

★★★

ಹೆರೆತುಪ್ಪದೊಂದಿಗೆ ಸಿಹಿ ಮಜ್ಜಿಗೆ ಕಡುಬು, ಖಾರದ ಶ್ಯಾವಿಗೆಯ ಸಮೃದ್ಧ ಉಪಾಹಾರ. ತಿಂಡಿ ಮುಗಿದು ಕೈಗೆ ನೀರು ಬೀಳುತ್ತಿದ್ದಂತೆ ರಾಧಮ್ಮ ನಡುಮನೆಯ ಮೂಲೆಯಲ್ಲಿದ್ದ ಉಪ್ಪರಿಗೆ ಮೆಟ್ಟಿಲು ಹತ್ತಿ ತಮ್ಮ ಕೋಣೆಗೆ ಹೋದರು. ಒಂದೇ ಸಮ ಕೂತು ಬಂದ ಆಯಾಸಕ್ಕೆ ಬೆನ್ನುಕೋಲು ನಿಟಿಲುನಿಟಿಲೆನ್ನುತ್ತಿತ್ತು. ಹಾಸಿಗೆಯ ಮೇಲೆ ಕೈಕಾಲು ಚಾಚಿ ಅಂಗಾತ ಮಲಗಿದರೆ ದೇಹಕ್ಕೆ ಹಿತವಾಗುತ್ತದೆ. ಆಯಾಸ ಕಳೆಯುತ್ತದೆ...

ಕೋಣೆಯ ಬಾಗಿಲು ಮುಂದೆ ಮಾಡಿದ ರಾಧಮ್ಮ ಮೂಲೆಯಲ್ಲೊಂದು ಉದ್ದಾನುದ್ದದ ಗಾಜಿನ ಬಾಗಿಲಿನ ಕಪಾಟು ಕಂಡು ವಿಸ್ಮಯಗೊಂಡರು. ಅವರ ಪುಸ್ತಕಗಳನ್ನಿಟ್ಟುಕೊಳ್ಳಲು ವ್ಯವಸ್ಥೆ ಮಾಡಿದ್ದಾನೆ ಮಾಧವ. ಪುಸ್ತಕ ಒಂದಿದ್ದರೆ ಅತ್ತೆಗೆ ಊಟ, ತಿಂಡಿ ಏನೂ ಬೇಡ ಎಂದು ಅವನಿಗೆ ಗೊತ್ತಿದೆ. ಮೂಗಿಗೆ ಕವಡೆ ಕಟ್ಟಿಕೊಂಡಂತೆ ಇಷ್ಟು ವರ್ಷ ದುಡಿದಿದ್ದಾಯ್ತು. ಇನ್ನಾದರೂ ಮನಸ್ಸಿಗೆ ಬಂದ ಪುಸ್ತಕಗಳನ್ನು ಓದಿ ಮುಗಿಸಿ, ಹೊಸದನ್ನು ಖರೀದಿಸಿ, ತಮ್ಮೆದುರು ಕಾಲು ಚಾಚಿ ಬಿದ್ದಿರುವ ವಿರಾಮಕಾಲವನ್ನು ನೆನೆದು ರಾಧಮ್ಮನಿಗೆ ವಿಪರೀತದ ನೆಮ್ಮದಿ ಎನಿಸಿತು. ನಿಡಿದಾಗಿ ಕಾಲು ಚಾಚಿ, ಬಲಗೈಯನ್ನು ತಲೆಯಡಿಗಿಟ್ಟುಕೊಂಡು ಮಲಗಿದರು ರಾಧಮ್ಮ. ದಿಂಬು ಹೇಗೇ ಇರಲಿ, ಮಲಗುವಾಗ ಅವರ ಕೈ ತಲೆಯ ಕೆಳಗೆ ಇರಲೇಬೇಕು. 'ನಿನ್ನ ತಲೆಗೆ ನಿನ್ನದೇ ಕೈ' ಎನ್ನುವುದು ಪೂರ್ವನಿರ್ಧಾರಿತವಾಗಿದ್ದಾಗಿತ್ತಾ? ಈ ಕೋಣೆ, ಇದೇ ಕೋಣೆ, ಅವರ ಬದುಕಿನ ಏನೆಲ್ಲಾ ಏರಿಳಿತಗಳಿಗೆ ಸಾಕ್ಷಿಯಾಗಿದೆ ಅಂದರೆ ಅದಕ್ಕೇನಾದರೂ ಬಾಯಿ ಬರುವಂತಿದ್ದರೆ ಏನೆಲ್ಲಾ ಕತೆಗಳನ್ನು ಹೇಳುತ್ತಿತ್ತೋ, ಕೇಳುಗರನ್ನು ಹನಿಗಣ್ಣಾಗಿಸುತ್ತಿತ್ತೋ...

ಎಲ್ಲ ತಲೆಕೆಳಗಾಯ್ತು. ಪಿ.ಯು. ಮುಗಿಯುವುದರೊಳಗೆ ಅಪ್ಪ ಮದುವೆಗೆ ಅವಸರ ಮಾಡಬಾರದಿತ್ತು. ಮಾಡಿದ. 'ದೊಡ್ಡ ಮನೆತನದ ಹುಡುಗ' ಎಂದು ಅಪ್ಪನಿಗೆ ಕೊಂಬು. ಹುಟ್ಟಿದ ಮನೆ ಸುಮಾರಿನದು. ಅಲ್ಲಿಂದಲ್ಲಿಗೆ ಅನ್ನುವಂತಾದ್ದು. ಹೊಕ್ಕ ಮನೆಯಲ್ಲಿ ಲಕ್ಷ್ಮಿ ಕಾಲು ಮುರಿದುಕೊಂಡು ಬಿದ್ದಿರದಿದ್ದರೂ ಇವರಿಗೆ ಹೋಲಿಸಿದರೆ ಗಟ್ಟಿ ಕುಳಗಳು. ಉಡಲು, ತೊಡಲು ಯಾವ ಅರೆಯೂ ಇಲ್ಲ ಎನ್ನುವಂತವರು. 'ಇಷ್ಟು ಬೇಗ ಮದುವೇನಾ?' ಎಂದು ಬಾಗಿಲ ಸಂಧಿ ನಿಂತು ಕುಂಯ್ಗುಟ್ಟಿದ ಹುಡುಗಿ ಹುಡುಗನನ್ನು ನೋಡಿದ್ದೇ ಪರವಶಳಾಗಿಬಿಟ್ಟಳು. ಹೆಸರಿಗೆ ತಕ್ಕ ಹಾಗಿದ್ದ ಆ ಅವನು, ಮೋಹನ ಎನ್ನುವ ಹೆಸರಿನವನು. ಆ ವಯಸ್ಸಲ್ಲಿ ಕಣ್ಣಿಗೆ ಕಾಣುವುದೊಂದೇ, ಚಂದ. ಮೋಹನನಲ್ಲಿ ಅದು ಒಂದು ಮುಷ್ಟಿ ಹೆಚ್ಚೇ ಇತ್ತು.

ಅದ್ಧೂರಿಯಾಗಿ ನಡೆಯಿತು ಮದುವೆ. ಸಾಲದ ಹೊರೆ ತಲೆಯ ಮೇಲೆ ಹೊತ್ತರೂ ಜವಾಬ್ದಾರಿ